

# ಅಗರಬತ್ತಿಯ ತೇವ

ಸುಮ್ಮನೆ
ಕೇಳಿಸಿಕೊಳ್ಳಿ ನೀವು
ಯಾಕೋ ಆ ಕರಾಳ ಚರಿತ್ರೆ ಮತ್ತೆ ಮತ್ತೆ ನೆನಪಾಗುತಿದೆ!

ಕಾಡತೂಸಿನಿಂದ ಬಂಡೆಗಲ್ಲು ಸೀಳಿದಂತೆ ಎದೆ
ಯ ಮೇಲಾದ ಗಾಯ ಇನ್ನೂ ಆರಿಲ್ಲ; ರಕ್ತ ಮೆತ್ತಿದ
ಕೈಗಳಿಂದ ಜಿನುಗುವ ಕಮಟು ವಾಸನೆಯಲ್ಲಿನ
ಉಂಡ ನೋವು ಚರಿತ್ರೆಯಲ್ಲಿ ಹುದುಗಿ ಹೋದ
ಕಥೆಗಳನ್ನು ಹಾಡಾಗಿಸಿದೆ!

ಈಗ,
ಅಲ್ಲಿ ದೂರದಲ್ಲಿ ಯಾರೋ ಕುಳಿತು ಪಿತೂರಿ ಮಾಡುತ್ತಾರೆ:
ಇಲ್ಲಿ ಅರಳಿದ ಹೂವುಗಳು ಸುಡುವ ಬೆಂಕಿಯಲ್ಲಿ ನಿತ್ಯವೂ ಕಮರುತಿವೆ;
ಈಗಲೂ ಆ ಹಾಡು
ಕೇಳುವರಿಲ್ಲದೇ ಬರೀ ಗಾಳಿಯಲಿ ಕರಗಿ
ಹೋಗುತಿದೆ!



ಎಲ್ಲರ ಸಮ್ಮುಖದಲ್ಲಿ
ನಾಳೆ ದೇವರ ಮುಂದೆ ಭಯ ಭಕ್ತಿಯಿಂದ
ಹಚ್ಚಬೇಕೆಂದು
ಜೋಪಾನವಾಗಿ ತೆಗೆದಿಟ್ಟ ಅಗರಬತ್ತಿಯು ತೇವ
ಕಳೆದುಕೊಂಡಿರಲು ವರವ ಬೇಡಲು ನಾಲಗೆಯೇ
ಇಲ್ಲದಂತಾಗಿದೆ!

ಹೇಗಾದರೂ ಸರಿಯೇ,
ಆ ಕರಾಳ ಚರಿತ್ರೆಯನ್ನು ಮರು ರೂಪಿಸಿಯಾದರೂ
ಓದಬೇಕಿದೆ–
ಸುಗಂಧ ಸೂಸುವ ಅಗರಬತ್ತಿಯ ಸಮ್ಮುಖದಲ್ಲಿ
ಹೂವುಗಳು ಅರಳುವ ಸಂಭ್ರಮವನ್ನು ಸಂಭ್ರಮಿಸಲು!

● **ಕಲ್ಲೇಶ್ ಕುಂಬಾರ್ ಹಾರೂಗೇರಿ**

ಕಲೆ: ವಾಗೀಶ ಹೆಗಡೆ